ವೈ. ಧನಪಾಲ ಪ್ರಸಾದ, ಮಂಡ್ಯ
*ಗೋಹತ್ಯೆ ನಿಷೇಧ ಓಕೆ. ಎಮ್ಮೆ ಹತ್ಯೆ ನಿಷೇಧ ಯಾಕಿಲ್ಲ?*



ಗಂಡನ ವೃತ್ತಿಯೇ ಕಾರಣ! ಯಮನ ವಾಹನನ ಪತ್ನಿಯಾದ್ದರಿಂದ ಅಯ್ಯೋ ಎನ್ನುವವರು ಸಿಗುತ್ತಿಲ್ಲವಂತೆ.

ರಾಜು ಎಸ್. ಗಾಲಿ, ಅಥಣಿ
*ಚುನಾವಣೆಗೆ ನಿಲ್ಲುವ ಅಭ್ಯರ್ಥಿಗಳಿಗೇಕೆ ವಿದ್ಯಾರ್ಹತೆ ಕಡ್ಡಾಯವಿಲ್ಲ ಸ್ವಾಮಿ?*
ಇದೆ. ಅವರ ವಿದ್ಯೆಗಳೇ ಬೇರೆ – ಕಡಿ, ಬಡಿ, ಕದಿ, ಕೊಲ್ಲು...

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಸಾವಿನ ನಂತರ ಏನಿರುತ್ತೆ?*
ಶ್ರದ್ಧಾಂಜಲಿ ಸಭೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
*ನೊಂದ ಸೀತೆಗೆ ಸಾಂತ್ವನ ನೀಡದೆ ಶಂಕಿಸಿ ಬೆಂಕಿಗೆ ನೂಕಿದ ಶ್ರೀರಾಮನಿಗೂ, ಶ್ರೀಸಾಮಾನ್ಯನಿಗೂ ವ್ಯತ್ಯಾಸವೇನು?*
ಶ್ರೀರಾಮ ನಡೆಸಿದ್ದು ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ; ಶ್ರೀಸಾಮಾನ್ಯನದು ಅಟೆಂಪ್ಟ್ ಟು ಮರ್ಡರ್.

ಹೆಚ್. ಗೋಪಿನಾಥ್, ಬಳ್ಳಾರಿ
*ಮಗು ಹುಟ್ಟಿದ ತಕ್ಷಣ ಏಕೆ ಅಳುತ್ತದೆ?*



ಅದು ಅಳುವಲ್ಲ. ಅಮ್ಮನ ಪ್ರೀತಿಯ ಕದವನ್ನು ತೆರೆಸುವ ಕಾಲಿಂಗ್ ಬೆಲ್.

ಎಚ್.ಆರ್. ದೇಸಾಯಿ, ರಾಯಚೂರು
*ಅನ್ನ ಕಮ್ಮಿ, ಬುದ್ಧಿ ಹೆಚ್ಚು ಗಳಿಸಿಕೊಡುವ ವಿದ್ಯೆ ಯಾವುದು?*
ಡಯಟಿಷಿಯನ್ ಕೋರ್ಸ್.

ಅಮ್ಮವರ ವಸುಂಧರಾ ಲಕ್ಷ್ಮಣ, ಕುಶಾಲನಗರ
*ದಿನವಿಡೀ ಪಕ್ಕದ ಮನೆಯತ್ತ ನೋಡುವವರಿಗೆ ಕಿಟಕಿಭಾಗ್ಯ ಯೋಜನೆ ಜಾರಿಗೆ ತಂದರೆ ಹೇಗೆ?*
ಛೆ! ಬೇಡ! ಕದ್ದು ನೋಡುವುದರಲ್ಲಿರುವ ಖುಷಿ ಖುದ್ದು ನೋಡುವುದರಲ್ಲಿರುವುದಿಲ್ಲ!

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ಕೆಟ್ಟ ಗುಣಗಳಿಗೆ ಸುಲಭವಾಗಿ ಆಕರ್ಷಿತರಾಗುವ ನಾವು ಒಳ್ಳೆಯದಕ್ಕೆ ಒಲಿಯುವುದಿಲ್ಲ. ಏಕೆ ಸರ್?*
ಕೆಟ್ಟ ಚಾಳಿಗೆ ಬೀಳುತ್ತೇವೆ; ಪದವಿಗೆ ಏರುತ್ತೇವೆ; ಬೀಳುವುದು ಸುಲಭ; ಏರುವುದು ಕಷ್ಟ.

ದಿನೇಶ್, ಗುಡ್ಡದೂರು
*ಚಿತ್ರರಂಗಕ್ಕೂ, ರಾಜಕೀಯಕ್ಕೂ ಇರುವ ವ್ಯತ್ಯಾಸವೇನು ರಾಮ್?*
ಅಲ್ಲಿ ಹೆಣ್ಣಿನೊಡನೆ ಸರಸ ಓಕೆ; ಇಲ್ಲಿ ಹೆಣ್ಣಿನೊಡನೆ ಸರಸ ಜೋಕೆ!

ಹೆಚ್.ಎಂ. ಅಂಬುಜ, ಮೈಸೂರು
*ಮನೆ ಮತ್ತು ಹೆಂಡತಿ ಆದಷ್ಟೂ ಸ್ವಂತದ್ದಿರಬೇಕಂತೆ. ಏಕೆ ರಾಂಜೀ?*
ಸತಿ, ವಸತಿ ಅಭದ್ರವಾದಷ್ಟೂ ಮತಿ, ಸ್ಥಿತಿ ಕೆಡುವುದರಿಂದ.

ಶಿವಮೊಗ್ಗ ರಮೇಶ್, ಮೈಸೂರು
*ಲೋಕಸಭೆಗೂ, ಶೋಕಸಭೆಗೂ ವ್ಯತ್ಯಾಸವೇನು ಗುರುಗಳೇ?*
ಅಲ್ಲಿ ತೆಗಳುವುದೇ ಪರಿಪಾಠ; ಇಲ್ಲಿ ಹೊಗಳುವುದೇ ಪರಿಪಾಠ.

ಮುರಲೀಧರ ಕುಲಕರ್ಣಿ, ಬೀದರ್
*ಹೆಣ್ಣು, ಹೊನ್ನು, ಮಣ್ಣು ಬೇಡವೆಂದರು ಅಂದಿನ ಸಂತರು. ಇಂದು ಕೆಲವು ಮಠಾಧೀಶರು ಅವುಗಳ ಹಿಂದೆಯೇ ಬಿದ್ದಿರುವರಲ್ಲ?*
ಸರಿಯೇ; ಅವರು ಸಂತರು, ಇವರು ವಸಂತರು.

ಎ.ವಿ. ಲಕ್ಷ್ಮಿ, ನರಗುಂದ
*ಸತ್ತವರೆಲ್ಲ ಶಿವನ ಪಾದ ಸೇರುವುದಾದರೆ ಸತ್ತರೆಂದು ಅಳುವುದೇಕೆ?*
ಎಂತೆಂತಹವರೋ ಪಾದ ಸೇರಿದರೆ ಏನು ಫುಟ್ ಇಂಫೆಕ್ಷನ್ ಆದೀತೋ ಎಂದು ಶಿವನಿಗಾಗಿ ಅಳುವುದಂತೆ.

ಸಿ.ಎನ್. ಶ್ಯಾನ್‌ಭೋಗ್, ಮೈಸೂರು
*ತಟ್ಟೆ ಎತ್ತುವ ಮಾಣಿಗಳಿಗೇಕೆ ಯಾರೂ ಟಿಪ್ಸ್ ಕೊಡುವುದಿಲ್ಲ?*
ಪರಿಶ್ರಮದ ಕತ್ತೆಗೆ ಒದೆ, ಮೋಜಿನ ಕುದುರೆಗೆ ಮಾಲಿಷ್ ಮಾಡುವುದು ನಮ್ಮ ಸಂಪ್ರದಾಯ.

## ಬಹುಮಾನಿತ ಪ್ರಶ್ನೆ

ಎಚ್. ಆನಂದಕುಮಾರ್, ಚಿತ್ರದುರ್ಗ
*ಉರಿಬಿಸಿಲಿನಲ್ಲಿ ಕೋಟು-ಬೂಟು ಟೈ ಧರಿಸಿ ಕೋರ್ಟಿಗೆ ಹೋಗುವ ಲಾಯರುಗಳನ್ನು ಕಂಡು ನಿಮಗೇನೆನಿಸುತ್ತದೆ?*
'ನಾವು ನಿಮ್ಮ ಕೇಸ್ ನಡೆಸಲು ಸಾಕಷ್ಟು ಬೆವರು ಸುರಿಸಿದ್ದೇವೆ' ಎಂದು ಕಕ್ಷಿಗಳಿಗೆ ಹೇಳಲು ಪೂರಕವೆನಿಸುತ್ತದೆ.

ಬಿ.ಆರ್. ಸುರೇಶ್, ಶಿವಮೊಗ್ಗ
*ಹೆಣ್ಣನ್ನು ಕರೆಂಟ್‌ಗೆ ಹೋಲಿಸುತ್ತಾರಲ್ಲ, ಏಕೆ ಶಿವಾ?*
ಏಕೆಂದರೆ ಆಕೆಗೆ ಸೂಕ್ತವಾದ ಸರ್ಕ್ಯೂಟಿದ್ದರೆ ಬೆಳಕು; ಸರ್ಕ್ಯೂಟ್ ಷಾರ್ಟ್ ಮಾಡಿದರೆ ಸ್ಫೋಟ; ತಪ್ಪದೆ ದುಬಾರಿ ಬಿಲ್!.

ಮಹಾವೀರ ಕಾಸರ, ಶಿವಮೊಗ್ಗ
*ದಶಾನನನ ತಾಯಿಗೆ ಪ್ರಸವವಾಗಿದ್ದು ಹೇಗೆ?*
ರಕ್ಕಸಿ ಜರಾ 2 ಹೋಳುಗಳನ್ನು ಸೇರಿಸಿದಾಗ ಜರಾಸಂಧನಾದ; ಆಗೆಲ್ಲ ಮಗುವನ್ನು ಪಾರ್ಟ್ ಬೈ ಪಾರ್ಟ್ ಜೋಡಿಸಬಹುದಾಗಿತ್ತು.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
*ಅಭಿಮಾನಿಗಳು ನಿಮ್ಮ ಅಕೌಂಟ್‌ಗೆ ಲಕ್ಷ ಲಕ್ಷ ಹಳೆಯ ನೋಟುಗಳನ್ನು ಜಮಾ ಮಾಡಿದಂತೆ ಕನಸು ಕಂಡೆ. ಇದು ನಿಜವೆ?*



ಅಕ್ಷರಶಃ ನಿಜ. ಕನ್ನಡ ಹಾಸ್ಯ ಸಾಹಿತಿಗಳಿಗೆ ಅಭಿಮಾನಿಗಳು ಹಣ ನೀಡುತ್ತಾರೆಂಬುದು ಕನಸೆನ್ನುವುದು ಸತ್ಯಸ್ಯ ಸತ್ಯ.

ಪೇಂಟರ್ ಪಾಪು, ಸಂತೇಮರಹಳ್ಳಿ
*ಹೂವಿನ ಮೇಲೆ ಮಲಗಿದರೆ ಮೊದಲ ರಾತ್ರಿ; ಹೂ ನಮ್ಮ ಮೇಲೆ ಮಲಗಿದರೆ ಕೊನೆಯ ರಾತ್ರಿ. ಅಷ್ಟೇ ಅಲ್ಲವೆ ಜೀವನ?*
ಊಹೂಂ; ಮೆಟರ್ನಿಟಿ ಬಿಲ್‌ನಿಂದ ಮಾರ್ಚುಯರಿ ಬಿಲ್‌ನವರೆಗೆ.

ವಿ. ಹೇಮಂತಕುಮಾರ್, ಬೆಂಗಳೂರು
*ಈಗಿನ ಯುವಕ ಯುವತಿಯರು ತೂತು ಬಿದ್ದಿರುವ, ಹರಿದಿರುವ ಜೀನ್ಸ್ ಪ್ಯಾಂಟ್ ಧರಿಸುವುದೇಕೆ?*
ಟ್ರಾವಲ್ ನಿಯಮ; ಲೆಸ್ ಲಗೇಜ್ ಮೋರ್ ಕಂಫರ್ಟ್!

■ ರಾಮ್